ಇಮೀಡಿಯೆಟ್ ಮಾಡಿಸಬೇಕು. ಇದರ ಜೊತೆಗೆ ಕೆ ಸಿ ಸಿ ಬ್ಯಾಂಕಿಗೆ ತಾವು ಏನು ಪ್ರಾಮಿಸ್ ಮಾಡಿದ್ದೀರಿ. ಅದೂ ಇಮೀಡಿಯೆಟ್ ರಿಲೀಸ್ ಆಗುವ ಹಾಗೆ ಆಗಬೇಕು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ರೈತರ ಕಷ್ಟಕ್ಕೆ ಸರ್ಕಾರ ಚಿಂತಿಸಬೇಕು ಏನ್ನುವ ವಿಷಯದಲ್ಲಿ ಸದನದ ಸದಸ್ಯರುಗಳಿಗಿರತಕ್ಕಂಥ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು, 400 ಕೋಟಿ ರೂಪಾಯಿಗಳನ್ನು 2005–06ನೇ ಸಾಲಿನಲ್ಲೇ ಕೊಡುತ್ತೇವೆ ಎಂದು ನಿನ್ನೆಯ ಬಜೆಟ್‌ನಲ್ಲಿ ಹೇಳಿದ್ದೇವೆ, ಇನ್ನೂ ಸುಮಾರು 225 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆರ್ಥಿಕ ಇಲಾಖೆಯ ಜೊತೆ ಚರ್ಚೆ ಮಾಡಿ, ಆದಷ್ಟು ಬೇಗ ಈ ಹಣವನ್ನು ಕೊಡತಕ್ಕಂಥಾದ್ದನ್ನು ಮಾಡುತ್ತೇವೆ. ಮುಂದಿನ ವರ್ಷದಿಂದ ಶೇಕಡಾ ನಾಲ್ಕರ ಬಡ್ಡಿದರದಲ್ಲಿ ರೈತರಿಗೆ ಸಾಲವನ್ನು ವ್ಯವಸ್ಥೆಯನ್ನು ನಿನ್ನೆ ನಿನ್ನೆ ಘೋಷಣೆ ಮಾಡಿದ್ದೇವೆ. ಇದಕ್ಕೆ ಹಣವನ್ನು ಇಟ್ಟಿಲ್ಲ, ಕೇವಲ ಪ್ರಚಾರಕ್ಕೋಸ್ಕರ ಮಾಡಿರುವಂಥಾದ್ದು ಏನ್ನುವ ಆತಂಕ, ಅನುಮಾನಗಳೇನಿವೆ, ಅ ಅನುಮಾನಗಳ ಅವಶ್ಯಕತೆಯಿಲ್ಲ ಈ ಅನುಮಾನವನ್ನು ನಾವು ಸದ್ಯದಲ್ಲೇ ಪರಿಹರಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ.

ಪ್ರಶ್ನೆ ಸಂಖ್ಯೆ : 9(93)

(ಪ್ರಶ್ನೆಯನ್ನು ಹಾಕಿರುವ ಮಾನ್ಯ ಸದಸ್ಯರಾದ ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯತ್ ಖಾನ್ ರವರ ಪರವಾಗಿ ಮತ್ತೊಬ್ಬ ಸದಸ್ಯರಾದ ಎಸ್. ಆರ್. ಮೋರೆಯವರು ಪ್ರಶ್ನೆಯನ್ನು ಕೇಳಬೇಕೆಂದು ಮಾನ್ಯ ಅಧ್ಯಕ್ಷರು ಸೂಚಿಸಿದರು. ಸದಸ್ಯರಾದ ಎಸ್.ಆರ್.ಮೋರೆಯವರು ಈ ಸಮಯದಲ್ಲಿ ಸದನದಲ್ಲಿ ಹಾಜರಿರಲಿಲ್ಲ)

ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 84ರ ಪಾಲಿಕೆಯ ಸ್ವತ್ತಿನ ವಿವರಗಳನ್ನು ಒದಗಿಸುವುದು.

(10) 07. ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆ 84ನೇ ವಾರ್ಡಿನಲ್ಲಿರುವ ಕೃಷ್ಣಯ್ಯನಪಾಳ್ಯ ಮತ್ತು ಸದಾನಂದ ವಿವರಗಳಲ್ಲಿ ಪ್ರತ್ಯೇಕವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತುಗಳು ಯಾವುವು (ಅಡ್ಡರಸ್ತೆವಾರು, ಮುಖ್ಯ ರಸ್ತೆವಾರು ಖಾಲಿ ನಿವೇಶನಗಳ ಸಂಖ್ಯೆ, ವಿಸ್ತೀರ್ಣ, ನಾಗರೀಕ ಸೌಲಭ್ಯಗಳ ಸ್ವತ್ತಿನವಾರು ವಿವರ ಒದಗಿಸುವುದು);

ಆ) ಈ ಖಾಲಿ ಇರುವ ಮಹಾನಗರ ಪಾಲಿಕೆಯ ಸ್ವತ್ತನ್ನು ಸರ್ಕಾರವು ಯಾವ ಯಾವ ಯೋಜನೆಗೆ ಉಪಯೋಗಿಸಿಕೊಂಡಿದೆ (ವಿವರವಾದ ಮಾಹಿತಿಯನ್ನು ಒದಗಿಸುವುದು);

ಇ) ಈ ನಗರಗಳಲ್ಲಿ ಪಾಲಿಕೆಯ ಖಾಲಿ ಸ್ವತ್ತನ್ನು ಗುತ್ತಿಗೆ ಆಧಾರದ ಮೇಲೆ ಅನುಧಾನ ರಹಿತ ಶಾಲೆಗಳಿಗೆ ನೀಡಲು ಅವಕಾಶವಿದೆಯೇ ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ) ಈ ವಾರ್ಡಿನ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಈ ಕೆಳಕಂಡ ಆಸ್ತಿಗಳಿರುತ್ತವೆ.

1) ಓ.ಎಂ.ಬಿ.ಆರ್. ಬಡಾವಣೆಯ 3ನೇ ಬಿ ಮುಖ್ಯ ರಸ್ತೆಯಲ್ಲಿ ಒಂದು ಆಟದ ಮೈದಾನ.

2) ಹಳೆಯ ಬೈಯಪ್ಪನ ಹಳ್ಳಿಯಲ್ಲಿ ನಗರ ಪಾಲಿಕೆಯ ಔಷಧಾಲಯ ಕಟ್ಟಡ.

3) ಎನ್.ಜಿ.ಇ.ಎಫ್ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆ, ಸದಾನಂದ ನಗರದಲ್ಲಿ 267+47/2X250+410/2 ಅಡಿಗಳ ಅಳತೆಯ ಉದ್ಯಾನವನವಿರುತ್ತದೆ.

ಈ ಪ್ರದೇಶಗಳಲ್ಲಿ ನಗರ ಪಾಲಿಕೆಗೆ ಸೇರಿದ ಖಾಲಿ ನಿವೇಶನ ಹಾಗೂ ಸಿ. ಎ. ನಿವೇಶನ ಇರುವುದಿಲ್ಲ.

ಆ) ಮೇಲೆ 'ಅ' ನಲ್ಲಿ ತಿಳಿಸಿರುವಂತೆ ಒಂದು ಖಾಲಿ ಜಾಗವನ್ನು ಆಟದ ಮೈದಾನಕ್ಕೆ ಒಂದನ್ನು ಔಷಧಾಲಯ ಕಟ್ಟಡಕ್ಕಾಗಿ ಹಾಗೂ ಇನ್ನೊಂದನ್ನು ಉದ್ಯಾನವನಕ್ಕಾಗಿ ಉಪಯೋಗಿಸಿಕೊಳ್ಳಲಾಗಿದೆ.

ಇ) ಈ ಪ್ರದೇಶಗಳಲ್ಲಿ ಖಾಲಿ ಸ್ವತ್ತು ಇಲ್ಲದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದೀರಿ. ನಾನು ಇಲ್ಲಿ ಪ್ರಶ್ನೆ ಕೇಳಿರತಕ್ಕಂಥ ಮುಖ್ಯವಾದ ಉದ್ದೇಶವೆಂದರೆ, ಬೆಂಗಳೂರು ನಗರದಲ್ಲಿ ಖಾಸಗಿಯವರು ನಡೆಸತಕ್ಕಂಥ ವಿದ್ಯಾಸಂಸ್ಥೆಗಳಿಗೆ ಜಾಗ ಬೇಕು ಎಂದು ಅವರು ಸರ್ಕಾರಕ್ಕೆ ಮತ್ತು ಕಾರ್ಪೊರೇಷನ್ನಿಗೆ ಅರ್ಜಿಗಳನ್ನು ಹಾಕಿಕೊಂಡು ನೂರಾರು ಎಕರೆ ಭೂಮಿಯನ್ನು ಕಬಳಿಸುತ್ತಿರತಕ್ಕಂಥಾದ್ದು ಗಮನಕ್ಕೆ ಬಂದಿದೆ. ಆಯಾಕಟ್ಟಿನ ಪ್ರದೇಶಗಳಲ್ಲಿ ಬಡಾವಣೆಗಳಲ್ಲಿ ಅವರು ಯಾವ್ಯಾವುದೋ ಹೆಸರಿನಲ್ಲಿ ಅರ್ಜಿಗಳನ್ನು ಕೊಡುತ್ತಾರೆ. ಅಲ್ಲಿ ಅವರಿಗೆ ಶಾಲೆಗೆ ಎಂದು ಜಾಗವನ್ನು ಮಂಜೂರು ಮಾಡುತ್ತಾರೆ. ಕಡೆಗೆ ಅವರು ಅದನ್ನು ಖಾಸಗಿ ಆಸ್ತಿಯಾಗಿ ಮಾರ್ಪಾಟು ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳಿಗೆ ಮಾರಾಟ ಮಾಡಿಕೊಳ್ಳತಕ್ಕಂಥ ಸ್ಥಿತಿ ನಿರ್ಮಾಣವಾಗುತ್ತಿದೆ. ಆದರೆ, ಇಲ್ಲಿ ನನಗೆ

ಕೊಟ್ಟಿರತಕ್ಕಂಥ ಉತ್ತರದಲ್ಲಿ ಖಾಲಿ ಸ್ವತ್ತು ಇಲ್ಲದಿರುವುದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಎಲ್ಲಾ ಬಡಾವಣೆಗಳಲ್ಲೂ ಸಾಕಷ್ಟು ಜಾಗ ಖಾಲಿ ಇದೆ. ಆದರೆ ಇದು ಅನಧಿಕೃತವಾಗಿ ಸುಮಾರು ಜನ ಖಾಸಗಿ ವಿದ್ಯಾಸಂಸ್ಥೆಗಳವರ ಹಿಡಿತದಲ್ಲಿದೆ. ಅದನ್ನು ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಎಷ್ಟು ಕೋಟಿ ರೂಪಾಯಿಗಳ ಜಾಗಗಳು ಅಂಥ ಸಂಸ್ಥೆಗಳ ಅಧೀನದಲ್ಲಿವೆ? ಇವುಗಳಿಗೆ ದಯವಿಟ್ಟು ಸರ್ಕಾರ ಉತ್ತರ ಕೊಡಬೇಕು ಎಂಬುದು ನನ್ನ ಮನವಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಪ್ರಶ್ನೆ ಕೇಳಿರತಕ್ಕಂಥ ಪ್ರದೇಶಗಳಾದ ಕೃಷ್ಣಯ್ಯನಪಾಳ್ಯ ಮತ್ತು ಸದಾನಂದನಗರಗಳಲ್ಲಿ ಖಾಲಿ ಇದ್ದಂಥ ಜಾಗವನ್ನು ಈಗಾಗಲೇ ಮಹಾನಗರಪಾಲಿಕೆಯವರು ಮೂರು ಉದ್ದೇಶಗಳಿಗಾಗಿ ಕೊಟ್ಟಿರುವುದರಿಂದ ಖಾಲಿ ಜಾಗಗಳ್ಯಾವುವು ಇಲ್ಲ ಎಂದು ಉತ್ತರವನ್ನು ಒದಗಿಸಿದ್ದೇವೆ. ತಾವು ಎತ್ತಿದಂಥ ಪ್ರಶ್ನೆಯೆಂದರೆ, ಬೆಂಗಳೂರು ನಗರದಲ್ಲಿ ಹಲವಾರು ವಿದ್ಯಾಸಂಸ್ಥೆಗಳಿಗೆ ಖಾಲಿ ಜಾಗಗಳನ್ನು ಕೊಟ್ಟಿರತಕ್ಕಂಥ ಘಟನೆಗಳು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ವಿಷಯದಲ್ಲಿ, ಹೀಗೆ ಜಮೀನು ತೆಗೆದುಕೊಳ್ಳುವವವರ ಉದ್ದೇಶವೇ ಬೇರೆ ಇರುತ್ತದೆ. ಅವರು ಅದನ್ನು ಖಾಸಗಿ ಆಸ್ತಿಯನ್ನಾಗಿ, ಸ್ವಂತ ಆಸ್ತಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳುತ್ತಾರೆ ಎಂದು ತಮ್ಮ ಗಮನಕ್ಕೆ ತಂದಿದ್ದಾರೆ, ಈ ವಿಷಯದಲ್ಲಿ ಸರ್ಕಾರ ಮುಂದಿನ ದಿನಗಳಲ್ಲಿ, ಬೆಂಗಳೂರು ನಗರದಲ್ಲಿರತಕ್ಕಂಥ ಸರ್ಕಾರದ ಆಸ್ತಿಗಳನ್ನು ಪಡೆದುಕೊಳ್ಳತಕ್ಕಂಥ, ಹಿಂದಿನಿಂದ ಬಂದಿರತಕ್ಕಂಥ ಈ ರೀತಿಯ ವಾಡಿಕೆ ಏನಿದೆ, ಅದನ್ನು ಪರಿಶೀಲಿಸಿ, ಸರ್ಕಾರದ ಆಸ್ತಿಯನ್ನು ಸರಿಯಾದ ರೀತಿಯಲ್ಲಿ ಉಳಿಸತಕ್ಕಂಥಾದ್ದಕ್ಕೆ ಒಂದು ತೀರ್ಮಾನ ಮಾಡಬೇಕು ಎಂದು ಹೊಸ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ ಮುಂದಿನ ದಿನಗಳಲ್ಲಿ, ಈ ವಿಷಯದಲ್ಲಿ ನಮ್ಮ ಹೊಸ ಸರ್ಕಾರದ ನೀತಿಯನ್ನು ಪ್ರಕಟಗೊಳಿಸುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನಿಂದ ಈ ರೀತಿ ನಡೆದುಕೊಂಡು ಬಂದಿದೆ, ಅದನ್ನು ತನಿಖೆ ಮಾಡಿ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಅದು ಸ್ವಾಗತಾರ್ಹ ನನ್ನ ಹತ್ತಿರ ನಿರ್ದಿಷ್ಟವಾದಂಥ ಮಾಹಿತಿ ಇಲ್ಲ, ದಾಖಲೆ ಇಲ್ಲ. ಆದರೆ ಈ ರೀತಿಯ ಸಾವಿರಾರು ಕೋಟಿ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಯಾವ್ಯಾವುದೋ ಸಂಸ್ಥೆಗಳ ಹೆಸರಿನಲ್ಲಿ ಸರ್ಕಾರದಿಂದ ಭೂಮಿ ತೆಗೆದುಕೊಳ್ಳತಕ್ಕಂಥಾದ್ದು ಆಗುತ್ತಿದೆ. ಆಶ್ರಮ ಕಟ್ಟುತ್ತೇವೆ. ಸ್ಕೂಲ್ ಕಟ್ಟುತ್ತೇವೆ,

ವೃದ್ಧಾಶ್ರಮ ಕಟ್ಟುತ್ತೇವೆ, ಅನಾಥಾಶ್ರಮಗಳನ್ನು ಮಾಡುತ್ತೇವೆ ಎಂದು ಜಮೀನನ್ನು ಸರ್ಕಾರದಿಂದ ಪಡೆದುಕೊಳ್ಳತಕ್ಕಂಥಾದ್ದು, ಕಾರ್ಪೊರೇಷನ್ನಿನಿಂದ ಪಡೆದು ಕೊಳ್ಳತಕ್ಕಂಥಾದ್ದು ಮಾಡಿ, ಐದಾರು ಅಥವಾ ಹತ್ತಾರು ವರ್ಷಗಳ ನಂತರ ಅವರು ಸ್ವಂತ ಪ್ರಾಪರ್ಟಿಯಾಗಿ ಕನ್ವರ್ಟ್ ಮಾಡಿಕೊಳ್ಳುತ್ತಾರೆ. ಈ ರೀತಿಯ ದಂಧೆ ಬೆಂಗಳೂರು ನಗರದಲ್ಲಿ ನಡೆದು, ಇಲ್ಲಿನ ಬಡವರಿಗೆ ಸೈಟು ಇಲ್ಲ, ಸರ್ಕಾರೀ ಕಟ್ಟಡಗಳಿಗೆ ಜಾಗ ಇಲ್ಲದಂತಾಗಿದೆ. ಆದರೆ ಖಾಸಗಿ ಸಂಸ್ಥೆಗಳವರ ಆಸ್ತಿ ಹೇರಳವಾಗಿ ಬೆಳೆಯುತ್ತಿದೆ. ಇದು ಎಲ್ಲರ ಗಮನಕ್ಕೆ ಬಂದಿರತಕ್ಕಂಥ ವಿಚಾರ. ದಯವಿಟ್ಟು ಇದಕ್ಕೆ ಕಡಿವಾಣ ಹಾಕಬೇಕು, ಏಕೆಂದರೆ ಬೆಂಗಳೂರು ನಗರ ಇವತ್ತು ವಿಶಾಲವಾಗಿ ಬೆಳೆಯುತ್ತಿದೆ. ಅದು ಉದ್ದಗಲಕ್ಕೂ ಬೆಳೆಯುತ್ತಿದೆ. ಹೀಗೆ ಬೆಳೆಯುತ್ತಿರತಕ್ಕಂಥ ಪ್ರದೇಶಗಳಲ್ಲಿ ಇಂಥ ಸಂಸ್ಥೆಗಳು ಇನ್ನೂ ಹೆಚ್ಚು ಹುಟ್ಟಿಕೊಳ್ಳುತ್ತವೆ. ಅವರು ಸರ್ಕಾರಕ್ಕೆ ಅರ್ಜಿ ಹಿಡಿದುಕೊಂಡು ಬರುತ್ತಾರೆ. ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತರುತ್ತಾರೆ, ಕಾರ್ಪೊರೇಷನ್ನಿನ ಮೇಲೆ ಒತ್ತಾಯ ತರುತ್ತಾರೆ ಒತ್ತಾಯ ತಂದು ಜಾಗ ಕೊಡಿ ಎಂದು ಕೇಳುತ್ತಾರೆ. ಪ್ರಾರಂಭದಲ್ಲಿ ಹತ್ತು ಹನ್ನೆರಡು ವರ್ಷಗಳವರೆಗೆ ಅಲ್ಲಿ ಬೋರ್ಡ್ ಇರುತ್ತದೆ. 10–12 ವರ್ಷಗಳಾದ ಮೇಲೆ ಬೋರ್ಡ್ ತಿರುವಿ ಹಾಕಿಬಿಟ್ಟಿರುತ್ತಾರೆ. ಅಲ್ಲಿ ಇನ್ನೊಂದು ಬೋರ್ಡ್ ಬಂದುಬಿಟ್ಟಿರುತ್ತದೆ. ಈ ರೀತಿಯಾಗಿ ನಡೆಯುತ್ತಿದೆ. ದಯವಿಟ್ಟು ಇದರ ಬಗ್ಗೆ ಸರಿಯಾದಂಥ ಮಾಹಿತಿಯನ್ನು ತೆಗೆದುಕೊಂಡು ಬೆಂಗಳೂರು ನಗರದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಲೂಟಿ ಹೊಡೆಯುತ್ತಿರುವುದನ್ನು ನಿಲ್ಲಿಸಬೇಕು, ಅದಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ನಡೆದಿರತಕ್ಕಂಥ ಬೆಲೆ ಬಾಳತಕ್ಕಂಥ ಜಾಗಗಳನ್ನು ಖಾಸಗಿ ಸಂಸ್ಥೆಗಳಿಂದ ಕೊಡತಕ್ಕಂಥ ವ್ಯವಸ್ಥೆಯಿದ್ದು, ನಿವೇಶನಕ್ಕಾಗಿ ಸಾರ್ವಜನಿಕರ ಕೂಗುಗಳಿರುವ ಈ ಸಂದರ್ಭದಲ್ಲಿ ಇಂಥ ಸಂಸ್ಥೆಗಳಿಗೆ ಜಾಗಗಳನ್ನು ಕೊಡುವ ವ್ಯವಸ್ಥೆಗೆ ಕಡಿವಾಣ ಹಾಕಬೇಕೆಂದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಹಲವಾರು ವರ್ಷಗಳಿಂದ ಇಂಥ ಸಂಘಸಂಸ್ಥೆಗಳ ಹೆಸರಿನಲ್ಲಿ ಬೆಲೆ ಬಾಳತಕ್ಕಂಥ ನಿವೇಶನಗಳನ್ನು ಪಡೆಯತಕ್ಕಂಥ ವ್ಯವಸ್ಥೆಯಿದ್ದು, ಇಂತ ಸರ್ಕಾರೀ ಆಸ್ತಿಗಳನ್ನು ಮುಂದೆ ರಕ್ಷಣೆ ಮಾಡಬೇಕು ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಮೊನ್ನೆ ನಾನು ಗರ ಪ್ರದಕ್ಷಿಣೆಗೆ ಹೋದಾಗ ಕಂಡಂತೆ ಬೆಂಗಳೂರು ನಗರದಲ್ಲಿರತಕ್ಕಂಥ ಕೆರೆಗಳನ್ನು, ರಾಜ ಕಾಲುವೆಗಳನ್ನು

ಒತ್ತುವರಿ ಮಾಡಿ, ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ, ನಿವೇಶನಗಳನ್ನು ಮಾಡಿ ಅಮಾಯಕರಿಗೆ ಮಾರತಕ್ಕಂಥ ವ್ಯವಸ್ಥೆ ಹಲವಾರು ವರ್ಷಗಳಿಂದ ಪ್ರಾರಂಭವಾಗಿದೆ. ಕಳದೆ ಭಾನುವಾರ ನಾನು ಕೆಲವು ಪ್ರದೇಶಗಳಿಗೆ ಭೇಟಿ ಕೊಟ್ಟಾಗ ಐದಾರು ಸಾವಿರ ರೂ, ಸಂಬಳಕ್ಕೆ ಕೆಲಸಕ್ಕೆ ಹೋಗತಕ್ಕಂಥ ಅಮಾಯಕ ಹೆಣ್ಣುಮಕ್ಕಳನ್ನು ದಿಕ್ಕುತಪ್ಪಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಪರಭಾರೆ ಮಾಡಿರತಕ್ಕಂಥ ಘಟನೆಗಳನ್ನು ನೋಡಿದ್ದೇನೆ. ತಾವು ಅನುಮತಿಯನ್ನು ಕೊಟ್ಟರೆ, ಬೆಂಗಳೂರು ನಗರದಲ್ಲಿ ನಡೆಯುತ್ತಿರತಕ್ಕಂಥ ಇಂಥ ವಿಷಯಗಳ ಬಗ್ಗೆ ಪರಿಶೀಲಿಸಲು ಒಂದು ಸದನ ಸಮಿತಿಯನ್ನು ತಾವು ಮಾಡುವುದರ ಮುಖಾಂತರ, ಬೆಂಗಳೂರು ನಗರದಲ್ಲಿ ನಡೆದಿರತಕ್ಕಂಥ ಎಲ್ಲಾ ಅವ್ಯವಹಾರದ ಬಗ್ಗೆ ಸಮಗ್ರವಾಗಿ ಸದನದ ಮುಂದೆ ಇಡತಕ್ಕಂಥಾದ್ದನ್ನು ಮಾಡಿ, ಮುಂದಿನ ದಿನಗಳಲ್ಲಿ ಈ ರೀತಿಯ ದಂಧೆ ನಡೆಯತಕ್ಕಂಥಾದ್ದಕ್ಕೆ ಸಂಪೂರ್ಣ ಕಡಿವಾಣ ಹಾಕತಕ್ಕಂಥಾದ್ದಕ್ಕೆ ತಾವು ಒಂದು ನಿರ್ಧಾರವನ್ನು ಮಾಡಿದರೆ ಸರ್ಕಾರ ಅದಕ್ಕೆ ಸ್ಪಂದಿಸುತ್ತದೆ ಎಂದು ಹೇಳಲು ಬಯಸುತ್ತೇನೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ನಿರ್ಧಾರ ಮಾಡುವುದು ಅಧ್ಯಕ್ಷರಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನಿರ್ಧಾರ ಮಾಡಬೇಕು. ನಿರ್ಧಾರ ಮಾಡಿದರೆ ಆಗುತ್ತದೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : ಇದನ್ನು ನಾವು ಸ್ವಾಗತ ಮಾಡುತ್ತೇವೆ ಸ್ವಾಮಿ.

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆಂದರೆ, 'ಈ ತರಹ ಆಗಿದೆ. ನನ್ನ ಗಮನಕ್ಕೆ ಬಂದಿದೆ, ಈಗ ಸದನ ಸಮಿತಿ ಬೇಕಾದರೆ ರಚನೆ ಮಾಡುವುದಕ್ಕೆ ನನ್ನ ಒಪ್ಪಿಗೆ ಇದೆ' ಎಂದು ಹೇಳಿದರು.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸದನ ಸಮಿತಿಯನ್ನು ಅವರೇ ಮಾಡಬೇಕು. ಮಾಡಲಿ. ಸದನ ಸಮಿತಿ ಮಾಡಿದರೆ ಸಂತೋಷ. ಸದನ ಸಮಿತಿ ಮಾಡಿದರೆ ಸ್ವಾಗತ ಮಾಡುತ್ತೇವೆ. ಅವರು ಮಾಡಲಿ. ಬೇಡ ಎಂದು ಹೇಳುತ್ತಾರೆ?

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ಕಡೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ನಡೆಯುತ್ತಿದೆ. ಇನ್ನೊಂದು ಕಡೆ, land acquire ಮಾಡಿದ್ದೇವೆ, Industry ಗೆ ಇರುಬಹುದು, road ಗೆ ಇರಬಹುದೆಂದು

ಎಲ್ಲೆಲ್ಲಿ ಬೇಕೋ ಅಲ್ಲಲ್ಲಿಗೆ ಹೋಗಿ demolish ಮಾಡುವುದು, ಆ land ನ್ನೆಲ್ಲಾ ನನ್ನದೆಂದು ಹೇಳಿ ಅತಿಕ್ರಮಣ ಮಾಡುವುದನ್ನೂ ಕೂಡ ತಮ್ಮ ಗಮನಕ್ಕೆ ತಂದಿದ್ದೇವೆ. ನಾನು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಅವತ್ತು ಹೋಗಿ ರಸ್ತೆ ರೋಖೋ ಆಗಿರುವುದನ್ನು ತಪ್ಪಿಸಿದ್ದೇವೆ. Land ಯಾರಿಗೆ ಕೊಟ್ಟಿರುತ್ತೀರಿ, acquisition ಆಗಿದ್ದರೆ, Government ಆದೇಶ ಇದ್ದರೆ, Court ಆದೇಶ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಹೋಗಿ Survey ಮಾಡಿ ಬಿಡಿಸಿಕೊಳ್ಳಬೇಕು. ಆದರೆ ಹಾಗೇನಿಲ್ಲ. ಒಂದು survey number ನಲ್ಲಿ ನೀವು 5 ಗುಂಟೆ ಜಾಗ ಕೊಟ್ಟಿದ್ದರೆ ಅಲ್ಲಿ 5 ಎಕರೆಯಷ್ಟು ಜಾಗವನ್ನು acquire ಮಾಡುವ ಸ್ಥಿತಿ ಬೆಂಗಳೂರಿನಲ್ಲಿ ನಡೆಯುತ್ತಿದೆ. ಇದನ್ನೆಲ್ಲಾ ತಾವು ತಡೆಗಟ್ಟಲೇಬೇಕು. ಆ ಗೊಟ್ಟಿಗೆರೆಯಲ್ಲಿ ನಡೆದ ವಿಚಾರದ ಬಗ್ಗೆ ನಾವು ಅವತ್ತು ಬಂದು ತಮಗೆ ಹೇಳಿದೆವು. ಇಲ್ಲ Assembly ನಡೆಯುತ್ತಿತ್ತು. ಅಲ್ಲಿಗೆ ದೊಡ್ಡ bulldozer ತೆಗೆದುಕೊಂಡು ಹೋಗಿ ಮನೆಯನ್ನೂ ಸಹ ಒಡೆಯುವುದಕ್ಕೆ ಹೊರಟು ಬಿಟ್ಟಿದ್ದರು. ಬೆಂಗಳೂರಿನಲ್ಲಿ ಏನು ನಡೆಯುತ್ತಿದೆ ಏನ್ನುವುದು ಗೊತ್ತಾಗ ಬೇಕಾಗಿದೆ. ಅದನ್ನೆಲ್ಲಾ ಆ ವ್ಯಾಪ್ತಿಗೆ ತರುತ್ತಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ನಡೆಯುತ್ತಿರುವಂಥ ಎಲ್ಲಾ ಅವ್ಯವಹಾರಗಳ ವಿಷಯದಲ್ಲಿ ಸರ್ಕಾರ ಕಠಿಣವಾದ ಎಲಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಿದೆ. ಇವತ್ತು ಯಾರೇ ಪ್ರತಿಷ್ಠಿತ ವ್ಯಕ್ತಿಗಳು ಇರಬಹುದು, ಅಲ್ಲಿ ಪ್ರತಿಯೊಬ್ಬರ ಹಿಂದೆ ಇರತಕ್ಕಂಥ ವಿಷಯದಲ್ಲಿ ಹಿಂಜರಿಕೆ ಇಲ್ಲ. ನಿಷ್ಪಕ್ಷಪಾತವಾಗಿ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರ ಸಿದ್ಧವಿದೆ. ಅದಕ್ಕೋಸ್ಕರವೇ ನಾನು ಹೇಳಿದೆ ಸದನ ಸಮಿತಿಯನ್ನು ಮಾಡಬೇಕೆನ್ನುವುದಕ್ಕೆ ಸದನ ತೀರ್ಮಾನ ಮಾಡಿದರೆ . . . ನಾನು ತೀರ್ಮಾನ ಮಾಡುವುದಕ್ಕೆ ಸಿದ್ಧವಿದ್ದೇನೆ.

(ಗೊಂದಲ)

ಶ್ರೀಜೆ.ವಿ. ಶ್ರೀರಾಮರೆಡ್ಡಿ : ನೀವು ತೀರ್ಮಾನ ಮಾಡಿದರೆಮುಗಿಯಿತು.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಸದನ ಸಮಿತಿ ಮಾಡಿಬಿಡುತ್ತೇವೆಂದು ಹೇಳಿಬಿಡಿ. ಅದಕ್ಕೇನಂತೆ?

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : ಇದರಲ್ಲಿ ರಾಜಕಾರಣಿಗಳು ಇದ್ದಾರೆ. ಅಧಿಕಾರಿಗಳು ಇದ್ದಾರೆ. ಕೆಲವು ಅಧಿಕಾರಿಗಳು ಅಮೇರಿಕಾಕ್ಕೆ ಕೂಡ ಹೋಗಿ ಕುಳಿತಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ. ಎಲ್ಲಾ ರೀತಿಯ ತನಿಖೆಗೂ ನಾನು ಸಿದ್ಧನಿದ್ದೇನೆ, ಕೆಲವೆಲ್ಲಾ ನನಗೂ ಮನವರಿಕೆಯಾಗಿದೆ, ಸದನ ಒಪ್ಪಿದರೆ ಸದನ ಸಮಿತಿಯನ್ನೂ ಸಹ ಮಾಡಬಹುದೆಂದು' ಹೇಳಿದ್ದಾರೆ. He has got open mind. ಸದನ ಸಮಿತಿ ಮಾಡಬೇಕೆನ್ನುವುದಾದರೆ ಮಾಡೋಣ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಷ್ಟರಲ್ಲಿಯೇ ನಾನು ನಿರ್ಧಾರ ತೆಗೆದುಕೊಂಡು ಹೇಳುತ್ತೇನೆ.

ಅಧ್ಯಕ್ಷರು : ಆಯಿತು. in consultaion ಸದನ ಮಾಡೋಣ. ನಾಯಕರು, ವಿರೋಧ ಪಕ್ಷದ ನಾಯಕರೆಲ್ಲರನ್ನು ಕೇಳಿ ಒಂದು ಸದನ ಸಮಿತಿಯನ್ನು ಸಹ ಮಾಡೋಣ, ಆ report ಮೇಲೆ ವ್ಯಾಪಕವಾದ ಒಂದು ಕ್ರಮವನ್ನು ತೆಗೆದುಕೊಳ್ಳಲಿ.

ಶ್ರೀ ನಾಟಾಳ್ ನಾಗರಾಜ್ : ಸದನ ಸಮಿತಿಯನ್ನು ತಾವು ತಕ್ಷಣ ಇವತ್ತೇ ಮಾಡಿ. ಇವತ್ತೇ ಮಾಡಿದರೆ ಅದಕ್ಕೊಂದು ಬೆಲೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು : ಆಯಿತು, ಮಾಡೋಣ.

ಕರ್ನಾಟಕದ ಎಸ್.ಟಿ.ಎಫ್. ಪೊಲೀಸರಿಗೆ ಪರಿಹಾರ ಮತ್ತು ಬಹುಮಾನ ನೀಡುವುದು.

(11) 84. ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವೀರಪ್ಪನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ತಮಿಳುನಾಡಿನ ಎಸ್.ಟಿ.ಎಫ್. ಪೊಲೀಸರಿಗೆ ತಮಿಳುನಾಡು ಸರ್ಕಾರ ನೀಡಿರುವ ಬಹುಮಾನ ಹಾಗೂ ಪರಿಹಾರ ಸರ್ಕಾರಕ್ಕೆ ಗೊತ್ತಿದೆಯೇ

ಆ) ಹಾಗಿದ್ದಲ್ಲಿ, ಅವುಗಳ ವಿವರಗಳೇನು? ಕರ್ನಾಟಕದ ಎಸ್.ಟಿ.ಎಫ್. ಪೊಲೀಸರಿಗೆ ಸರ್ಕಾರ ನೀಡಿರುವ ಪರಿಹಾರ ಮತ್ತು ಬಹುಮಾನಗಳ ವಿವರಗಳೇನು? (ವಿವರ ನೀಡುವುದು)

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಇಲ್ಲ.

ಆ) ತಮಿಳುನಾಡು ಸರ್ಕಾರವು ನೀಡಿದ ಪರಿಹಾರ ಬಹುಮಾನದ ವಿವರಗಳು ಲಭ್ಯವಿರುವುದಿಲ್ಲ.